# ಮಂಗಳೂರು ವಿಶ್ವವಿದ್ಯಾನಿಲಯ

(Accredited by NAAC with 'A' Grade)

**ಸಂಖ್ಯೆ:** ಮಂವಿವಿ/ಎಸ್‌ಸಿಟಿಸೆಲ್/ಸಶಿವೇ/ಸಿ.ಆರ್5/2019-20/SCT-1

**ಕುಲಸಚಿವರ ಕಚೇರಿ**
**ಮಂಗಳಗಂಗೋತ್ರಿ - 574 199**
**ದಿನಾಂಕ: 13.05.2020**

## ಸುತ್ತೋಲೆ

*****

**ವಿಷಯ: ಸಂಶೋಧನಾ ಶಿಷ್ಯವೇತನದ ಮಾಸಿಕ ಬಿಲ್ಲು ಸಲ್ಲಿಕೆ ಬಗ್ಗೆ.**

ಉಲ್ಲೇಖ: ಹಣಕಾಸು ಅಧಿಕಾರಿಯವರ ಪತ್ರ ಸಂಖ್ಯೆ ಮಂವಿ/ಹವಿ/ಹ8/2019-20/925
ದಿನಾಂಕ 27.08.2019

**********

ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರಾತಿಗೆ ಸಂಬಂಧಿಸಿದಂತೆ, ದಿನಾಂಕ: **01.04.2020** ರಿಂದ ಅನ್ವಯಿಸುವಂತೆ ಪರಿಶಿಷ್ಟ ಜಾತಿ/ಪಂಗಡ ಘಟಕದ ಶಿಷ್ಯವೇತನ ಪಡೆಯುತ್ತಿರುವ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು ಈ ಕೆಳಗಿನ ಪ್ರಕ್ರಿಯೆಯ ಮೂಲಕ ಶಿಷ್ಯವೇತನ/ಸಾದಿಲ್ವಾರು ಬಿಲ್ಲುಗಳ ಪೂರಕ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

- **ಪ್ರತಿ ತಿಂಗಳ ಮಾಸಾಂತ್ಯಕ್ಕೆ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದ ಬಿಲ್ಲುಗಳನ್ನು ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು/ಸಂಯೋಜಕರಿಗೆ ಸಲ್ಲಿಸುವುದು.**
- **ವಿಭಾಗದ ಅಧ್ಯಕ್ಷರು/ಸಂಯೋಜಕರು ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸಿದ ಶಿಷ್ಯವೇತನದ ಬಿಲ್ಲುಗಳನ್ನು ಪ್ರತಿ ತಿಂಗಳ 5ನೇ ತಾರೀಖಿನ ಒಳಗಾಗಿ ವಿಶೇಷಾಧಿಕಾರಿ ಕಛೇರಿ, ಪರಿಶಿಷ್ಟ ಜಾತಿ/ಪಂಗಡ ಘಟಕಕ್ಕೆ ತಲುಪುವಂತೆ ಸಲ್ಲಿಸುವುದು.**
- **ವಾರ್ಷಿಕ ಸಾದಿಲ್ವಾರು ವೆಚ್ಚದ ಬಿಲ್ಲುಗಳಿಗೆ ಪೂರಕವಾಗಿ ರಾಸಾಯನಿಕಗಳು ಮತ್ತು ಲೇಖನ ಸಾಮಾಗ್ರಿಗಳ ಖರೀದಿಯನ್ನು ಪ್ರತ್ಯೇಕ ದಾಸ್ತಾನು ವಹಿಯಲ್ಲಿ ನಮೂದಿಸಿ ಮಾರ್ಗದರ್ಶಕರ ದೃಢೀಕರಣದೊಂದಿಗೆ ಪಾವತಿಗೆ ಸಲ್ಲಿಸುವುದು.**
- **ಶಿಷ್ಯವೇತನ ಮಂಜೂರಾತಿಗೆ ಸಂಬಂಧಿಸಿದಂತೆ ಮಾಸಿಕ ಬಿಲ್ಲಿನೊಂದಿಗೆ ಹಾಜರಾತಿ ವಹಿಯ ದೃಢೀಕೃತ ಪ್ರತಿ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ವಿವರವನ್ನು ನಮೂನೆಯಲ್ಲಿ (ಅನುಬಂಧ -I) ಸಲ್ಲಿಸುವುದು.**

ಮೇಲಿನ ಸೂಚನೆಗಳನ್ನು ಪರಿಶಿಷ್ಟ ಜಾತಿ/ಪಂಗಡ ಘಟಕದ ಶಿಷ್ಯವೇತನ ಪಡೆಯುತ್ತಿರುವ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕಾಗಿ ಸೂಚಿಸಲಾಗಿದೆ.

**ಕರಡು ಪತ್ರಕ್ಕೆ ಕುಲಸಚಿವರ ಅನುಮೋದನೆ ಪಡೆಯಲಾಗಿದೆ.**

13/5/2020
ಕುಲಸಚಿವರ ಪರವಾಗಿ

**ರಿಗೆ,**

1. ಅಧ್ಯಕ್ಷರು/ಸಂಯೋಜಕರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಹಾಗೂ ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ತೊರೆನೂರು, ಸೋಮವಾರ ಪೇಟೆ ತಾಲೂಕು, ಕೊಡಗು
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು/ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ

SC/ST ಘಟಕದ ಶಿಷ್ಯವೇತನ ಪಡೆಯುತ್ತಿರುವ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳ ಗಮನಕ್ಕೆ

**ಪ್ರತಿ:**

1. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ- ಇವರಿಗೆ 01.04.2020ರಿಂದ ಅನ್ವಯಿಸುವಂತೆ ತಮ್ಮ ವಿಭಾಗದಲ್ಲಿ ವಿದ್ಯಾರ್ಥಿಗಳಿಂದ ನೇರವಾಗಿ ಸಲ್ಲಿಕೆಯಾಗಿರುವ ಶಿಷ್ಯವೇತನ ಬಿಲ್ಲುಗಳನ್ನು ಹಿಂಬರಹದೊಂದಿಗೆ ಈ ಕಛೇರಿಗೆ ಕಳುಹಿಸುವಂತೆ ಕೋರಲಾಗಿದೆ.
2. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.